## 12

# ಅಬೀಗೈಲ

## ಬುದ್ಧಿವಂತ ಮಹಿಳೆ

## (25:14-42)

"ಒಬ್ಬ ಮಹಿಳೆಯ ಒಂದು ಕೂದಲು ಗಂಟೆಯ ಹಗ್ಗಕ್ಕಿಂತ ಹೆಚ್ಚು ಎಳೆಯುತ್ತದೆ" - ಇದು ಸಮಾಜದ ಮೇಲೆ ಮಹಿಳೆಯರು ಬೀರುವ ಪ್ರಭಾವದ ಕುರಿತು ಇರುವ ಜರ್ಮನ್ ದೇಶದ ಒಂದು ನಾಣ್ಣುಡಿ. ಆ ನಾಣ್ಣುಡಿಗೆ ಸರಿಯಾದ ಉದಾಹರಣೆ ಅಬೀಗೈಲಳು. ಧರ್ಮಶಾಸ್ತ್ರದಿಂದ ಅವಳ ತಂದೆ ತಾಯಿಗಳು ಅಥವಾ ಅವಳ ವಂಶಾವಳಿಯ ಕುರಿತು ತಿಳಿಯುವದಿಲ್ಲ. ಆದರೆ ಅವಳು ದೈವ ಭಕ್ತ ಮಾದರಿಯಲ್ಲಿ ಬೆಳೆದಳು, ಯಾಕೆಂದರೆ ಅವಳು ಯೆಹೋವನ ಕುರಿತು ಬಲ್ಲವಳಾಗಿದ್ದಳು ಮತ್ತು ಸುಂದರವಾದ ಭಕ್ತಿಯ ಜೀವಿ ತವನ್ನು ಹೊಂದಿದ್ದಳು.

1 ಸಮುವೇಲದಿಂದ ಅವಳ ಕುರಿತು ಈ ಕೆಲವು ವಿಷಯಗಳು ನಮಗೆ ಗೊತ್ತಾಗುತ್ತದೆ: ಅವಳ ಹೆಸರಿನ ಅರ್ಥ "ಆನಂದಕ್ಕೆ ಕಾರಣ" ಮತ್ತು ಅದು ಅವಳ ಸರ್ವಸಾಮಾನ್ಯ ಹೊರನೋಟ ಮತ್ತು ಇತರರ ಮೇಲಿನ ಅವಳ ಪ್ರಭಾವವನ್ನು ವ್ಯಕ್ತಪಡಿಸುತ್ತದೆ. ಅವಳು ಒಬ್ಬ ಭಯಂಕರ ವ್ಯಕ್ತಿಯನ್ನು ಮದುವೆ ಮಾಡಿಕೊಂಡಿ ದ್ದಳು. ಇದು ಅವಳ ಆಯ್ಕೆಯಾಗಿರಲಿಕ್ಕಿಲ್ಲ ಯಾಕೆಂದರೆ ಪೂರ್ವ ದೇಶದ ಪದ್ಧತಿಗಳ ಪ್ರಕಾರ ಅವಳ ತಂದೆ ಆಯ್ಕೆ ಮಾಡುವ ವ್ಯಕ್ತಿಯನ್ನು ಅವಳು ಮದುವೆ ಮಾಡಿಕೊಳ್ಳಲೇಬೇಕೆಂಬ ಒತ್ತಾಯವಿತ್ತು. ಅವಳು "ಸುಂದರಿ ಮತ್ತು ಬುದ್ಧಿ ವಂತೆಯಾಗಿದ್ದಳು" (25:3). ಇಂದು ತಮ್ಮ ಹೊರಗಿನ ಸೌಂದರ್ಯದ ಮೇಲೆ ಸಂಪೂರ್ಣ ವಾಗಿ ಕೇಂದ್ರೀಕರಿಸುತ್ತಾ ಬುದ್ಧಿವಂತಿಕೆಯನ್ನು ಅಲಕ್ಷಿಸಿ, ಅನೇಕ ಸ್ತ್ರೀಯರು ಸಂಯೋ ಗವನ್ನು ಕಡೆಗಾಣಿಸುತ್ತಾರೆ! ಸತ್ಯವೇದದಲ್ಲಿ ಇನ್ನೂ ಮೂವರು "ಸುಂದರಿಯರು" ಎಂದು ಕರೆ ಯಲ್ಪಟ್ಟಿದ್ದಾರೆ (ಸಾರಳು, ವಷ್ಟಿ ಮತ್ತು ಬತ್ಷೆಬೆ). ಅಬೀಗೈಲಳಲ್ಲಿನ ಒಳ್ಳೆತನ ಮತ್ತು ಆಂತರ್ಯದ ಲಾವಣ್ಯದಿಂದ ಅವಳ ಸೌಂದರ್ಯವು ಇನ್ನೂ ಹೆಚ್ಚಿದ್ದನ್ನು ನಾವು ಕಾಣುತ್ತೇವೆ (ಹೋಲಿಸು ಕೀರ್ತನೆ 45:13). ದಾವೀದನ ಎಂಟು ಪತ್ನಿಯರಲ್ಲಿ ಅವಳೂ ಒಬ್ಬಳು; ಉಳಿದವರು - ಮೀಕಲ (1 ಸಮುವೇಲ 18:27), ಬತ್ಷೆಬೆ (2 ಸಮುವೇಲ 12:24), ಅಹೀನೋವಮ, ಮಾಕ, ಹಗ್ಗೀತ, ಅಬಿಟಲ ಮತ್ತು ಎಗ್ಲ (2 ಸಮುವೇಲ 3:2-5). ಈ ಎಂಟು ಜನರಲ್ಲಿ, ಬಹುಶಃ ಅಬೀಗೈಲಳು ದಾವೀದನ ಜೀವನ ಅತಿ ಉತ್ತಮವಾಗುವದಕ್ಕೆ ಮೂಲವಾದಳು.

1 ಸಮುವೇಲ 25:3, 14-42 ಒಬ್ಬ ಅದ್ಭುತ ಸ್ತ್ರೀಯನ್ನು ಪರಿಚಯಿಸುತ್ತದೆ. ಅಬೀಗೈಲಳ ಕತೆಯು ದಾವೀದನ ಮೇಲೆಯೂ ಮತ್ತು ಅದನ್ನು ಓದುವವರೆಲ್ಲರ ಮೇಲೆಯೂ ಶಾಶ್ವತವಾದ ಗುರುತನ್ನು ಬಿಟ್ಟಿದೆ. ಅವಳನ್ನು ಕುರಿತು ಅವಲೋಕಿಸಿದ ನಂತರ, ಅವಳ ವಿಷಯದಲ್ಲಿ ದಾವೀದನು ಯಾಕೆ ಹೊಗಳಿದನು ಮತ್ತು ಪ್ರೀತಿಸಿದನು ಎಂದು ನಿಮಗೆ ಸರಳವಾಗಿ ಅರ್ಥವಾ ಗುತ್ತದೆ.

### ಅವಳ ಇತಿಹಾಸ

ದುಃಖಕರವಾದ ಭಾವನೆಗಳಿಂದ ತುಂಬಿದ ಘಟನೆಯಲ್ಲಿ ಅಬೀಗೈಲಳ ಕತೆ ಇದೆ: ಕೃತಜ್ಞತೆ, ಅಹಂಕಾರ, ಹಠ, ದ್ವೇಷ, ವೈಷಮ್ಯ, ಕೋಪ ಮತ್ತು ಮೂರ್ಖ ಮಾತು ಗಳು. ಈ ಕಗ್ಗತಲೆಯ ಸಂಧರ್ಭದಲ್ಲಿ, ಅಬೀಗೈಲಳ ಪ್ರಸನ್ನತೆಯು ಎಂದಿಗೂ ಮಾಸದ ಹೊಳೆಯುವ ಚುಕ್ಕೆಯಾಗಿದೆ.

ನಾಬಾಲನ ಹಿಂಡನ್ನು ದಾವೀದನ ಸೇನೆಯು ಕಾಯುತ್ತಿದ್ದರು ಮತ್ತು ರಕ್ಷಿಸಿದರು. ಇದು ಉದಾರವಾದ ಸೇವೆಯಾಗಿತ್ತು ಮತ್ತು ಅದಕ್ಕೆ ಯಾವ ಸಂಬಳವಿರಲಿಲ್ಲ. ಮೂರ್ಖ ನಾಬಾಲನು ದಾವೀದನ ಕರುಣೆಯನ್ನು ಮೂರ್ಖ ಮತ್ತು ಒರಟಾದ ರೀತಿಯಲ್ಲಿ ಹಿಂತಿರುಗಿಸಿದನು (25:3). ಸಾರ್ವಜನಿಕವಾಗಿ ದಾವೀದನಿಗಾದ ಅಪಮಾನವು ನಾಬಾಲನ ಮನೆಯವರ ರಕ್ತದಿಂದ ಹಿಂದಕ್ಕೆ ಕೊಡಬೇಕಾಯಿತು. ಒಂದು ರಕ್ತದೋಕುಳಿಯ ಮತ್ತು ದ್ವೇಷದ ಯುದ್ಧಕ್ಕೆ ದೃಶ್ಯ ಸಿದ್ಧವಾಯಿತು (25:22).

ಭಾವನೆಗಳು ಉತ್ತುಂಗವನ್ನು ತಲುಪಿದಾಗ, ಅಬೀಗೈಲಳು ಪ್ರವೇಶಿಸಿದಳು ಮತ್ತು ದಾವೀದನನ್ನು ಶಾಂತಗೊಳಿಸಲು ಹೆಜ್ಜೆ ಇಟ್ಟಳು (25:18ff.). ಅವಳು ದಾವೀದನಿಗೆ ಉದಾರವಾಗಿ ಬಹುಮಾನ ಕೊಟ್ಟಳು ಮತ್ತು ದೀನತೆಯಿಂದ ಕ್ಷಮೆ ಕೇಳಿದಳು. ಪ್ರತಿಕಾರದ ಬಯಕೆಯನ್ನು ಬಿಟ್ಟುಬಿಡುವಂತೆ ದಾವೀದನನ್ನು ಒಡಂಬಡಿಸಿದಳು. ದಾವೀದನನ್ನು ಶಮನಗೊಳಿಸಿದ ತರುವಾಯ ನಾಬಾಲನ ಬಳಿಗೆ ಮನೆಗೆ ಬಂದಳು. ಯಾಕೆಂದರೆ ಅವಳು ಒಬ್ಬ ನಿಷ್ಠಾವಂತ ಪತ್ನಿಯಾಗಿದ್ದಳು ಮತ್ತು ಒಬ್ಬ ಬೆಲೆಯಿಲ್ಲದ ಜೀವನಸಂಗಾತಿಯನ್ನು ರಕ್ಷಿಸುವವಳಾದಳು. ನಂಬಿಕೆಯಿಂದ ಮಾತುಕೊಟ್ಟ ಮನುಷ್ಯನೊಂದಿಗೆ ಅವಳು ಜೀವನ ಸಾಗಿಸಿದಳು.

ನಾಬಾಲನ ಮರಣದ ನಂತರ ದಾವೀದನು ಅಬೀಗೈಲಳನ್ನು ಮದುವೆಯಾಗಲು ಕೇಳಿಕೊಂಡನು (25:39). ಅಬೀಗೈಲಳು ದಾವೀದನಿಗೆ ಹೆಂಡತಿಯಾಗುವದಕ್ಕೆ ಮತ್ತು ದಾವೀದನ ಮಗನಿಗೆ ತಾಯಿಯಾಗುವದಕ್ಕೂ ಸಂತೋಷಪಟ್ಟಳು (2 ಸಮುವೇಲ 3:3; 1 ಪೂರ್ವಕಾಲ ವೃತ್ತಾಂತ 3:1). ತನ್ನ ಜೀವನ ಪೂರ್ತಿ ಅವಳು ದಾವೀದನೊಂದಿಗೆ ಕಳೆದಳು. ದಾವೀದನು ಬುದ್ಧಿವಂತ ಸಲಹೆಗಳನ್ನು ಮತ್ತು ಯುಕ್ತವಾದ ಆಲೋಚನೆಗಳನ್ನು ಅಬೀಗೈಲಳಿಂದ ಪಡೆದದ್ದನ್ನು ಕಲ್ಪಿಸುವದು ಕಷ್ಟವಲ್ಲ. ಅವಳು ಅವನಿಗೊಬ್ಬ ಯೋಗ್ಯ ಸಹಭಾಗಿಯಾದಳು (25:33ಎ).

## ಅವಳ ಗುಣಸ್ವಭಾವಗಳು

ಅಬೀಗೈಲಳ ಗುಣ ಸ್ವಭಾವಗಳು ಇಂದಿನ ಮಹಿಳೆಯರಿಗೆ ಒಂದು ಉದಾಹರಣೆಯಾಗಿದೆ.

*ಅವಳು ಗೌರವಿಸಲ್ಪಟ್ಟಳು (25:17).* ನಾಬಾಲನ ಅಹಂಕಾರದ ಮಾತುಗಳಿಂದ ಉಂಟಾದ ಆಪತ್ತನ್ನು ಸರಿಪಡಿಸುವದು ಹೇಗೆ ಎಂದು ಅಬೀಗೈಲಳಿಗೆ ಗೊತ್ತು ಎಂದು ಆಳುಗಳು ಅರಿತುಕೊಂಡಿದ್ದರು. ಅವಳ ಆಲೋಚನೆ ಮತ್ತು ನ್ಯಾಯವನ್ನು ಅವರು ಗೌರವಿಸಿದರು (25:35).

*ಅವಳು ಕೋಪವನ್ನು ಶಮನ ಮಾಡಲು ಬಲ್ಲವಳಾಗಿದ್ದಳು (25:33, 35).* ನಾಬಾಲನ ಒರಟುತನಕ್ಕೆ ಅವಳು ಕ್ಷಮೆ ಕೇಳುವದು ಇದು ಮೊದಲ ಬಾರಿಯಾಗಿರಲಿಲ್ಲ. ಅನೇಕ ಬಾರಿ ಅವಳು ಸಮಾಧಾನಪಡಿಸುವವಳ ಪಾತ್ರ ಮಾಡಿರಬಹುದು. ದಾವೀದನ ರೋಷವನ್ನು ಶಮನ ಮಾಡಲು ಅವಳು ಉಪಾಯ ಮತ್ತು ಜ್ಞಾನವನ್ನು ಉಪಯೋಗಿಸಿದಳು.

*ದೇವರಲ್ಲಿ ಅವಳಿಗೆ ಭರವಸೆ ಇತ್ತು (25:26ff.).* ಈ ಕತೆಯಲ್ಲಿ ಅವಳು ದೇವರನ್ನು ಅತೀ ಹತ್ತಿರದಿಂದ ಬಲ್ಲವಳಂತೆ ಪರಿಚಯಿಸಲ್ಪಟ್ಟಿದ್ದಾಳೆ. ಕಷ್ಟಕರವಾದ ದಾಂಪತ್ಯ ಜೀವನದಲ್ಲಿದ್ದರೂ ಕೂಡ ಅವಳಲ್ಲಿದ್ದ ಭರವಸೆಯು ಅವಳನ್ನು ಭಕ್ತ ಳಾಗಿ ಉಳಿಯುವಂತೆ ಮಾಡಿತು. ದಾವೀದನೊಂದಿಗೆ ಅವಳು ಮಾತನಾಡುವಾಗ, ಅವಳ ನಂಬಿಕೆಯು ಜೀವಿಸುವಂಥದ್ದು ಮತ್ತು ಪ್ರಾಯೋಗಿಕವಾದದ್ದು ಎಂದು ಅವಳ ಮಾತುಗಳು ವ್ಯಕ್ತಪಡಿಸಿದವು. 25:26, 27ರಲ್ಲಿ, ಈ ಬಹುಮಾನವು ತನ್ನಿಂದಲ್ಲ ಬದಲಾಗಿ ತನ್ನ ಪ್ರಾರ್ಥನೆಗೆ ಉತ್ತರವಾಗಿ ದೇವರಿಂದ ಬಂದದ್ದು ಎಂದು ಅವಳು ತನ್ನ ಹಾವಭಾವಗಳಿಂದ ತೋರಿಸಿದಳು ಎಂದು ಸ್ಪಷ್ಟವಾಗುತ್ತದೆ. ಆಹಾರವನ್ನು ಒದಗಿಸುವದರಲ್ಲಿ ದೇವರ ದಯೆಯನ್ನು ಅವಳು ಕಂಡಳು.

*ಅವಳು ಸಕಾರಾತ್ಮಕವಾಗಿಯೂ ಮತ್ತು ದೃಢವಾಗಿಯೂ ಇದ್ದಳು (25:18 ff.).* ಪರಿಸ್ಥಿತಿಯು ಬಹು ಅವಸರವುಳ್ಳದ್ದಾಗಿತ್ತು. ಮತ್ತು ಅವಳು ಒಂದು ದೃಢತೆಯಿಂದ ಮುಂದುವರಿದಳು. ತಾನೇನು ಮಾಡಬೇಕೋ ಅವಳಿಗೆ ತಿಳಿದಿತ್ತು ಮತ್ತು ಅವಳು ಉತ್ತಮವಾದದ್ದನ್ನೇ ಮಾಡಿದಳು. ದಾವೀದನನ್ನು ಬೇಟಿಯಾಗುವಾಗ ಆ ದಿನಗಳ ಲ್ಲಿನ ಪದ್ದತಿಗನುಸಾರವಾಗಿಯೇ ನಡಕೊಂಡಳು, ಆದರೆ ಕಾರ್ಯವು ಸರಿಯಾಗಿ ಜರಗುವಂತೆ ದೃಢ ಮಾಡಿಕೊಂಡಳು (25:24). ಪ್ರತಿಕಾರಕ್ಕೆ ಅವನಿಗಿರುವ ದಾಹ ತಪ್ಪೆಂದು ದಾವೀದನಿಗೆ ಹೇಳುವಲ್ಲಿ ಅವಳು ಹಿಂದೆ ಬೀಳಲಿಲ್ಲ. ನಂತರ ಅವಳು ನಾಬಾಲನೊಂದಿಗೆ ಮಾತನಾಡುವಾಗ, ಅವನ ತಪ್ಪಿನ ಅವಿವೇಕಿತನವನ್ನು ತೋರಿಸಿ ಎದುರಿಸಿದಳು (25:37).

*ತನ್ನ ಮನೆಯ ಭದ್ರತೆಯ ವಿಷಯದಲ್ಲಿ ಕಳಕಳಿಯಿತ್ತು (25:31).* ಅಬೀಗೈಲಳಿಗೆ ತನ್ನ ಮನೆಯ ಸುರಕ್ಷಿತತೆ ಬಹು ಪ್ರಾಮುಖ್ಯವಾಗಿತ್ತು. ಭದ್ರತೆಯನ್ನು ಕಾಪಾಡುವದಕ್ಕೆ ಬೇಕಾದದ್ದನ್ನೆಲ್ಲ ಅವಳು ಮಾಡಿದಳು.

*ಅವಳು ದೀನಳು ಮತ್ತು ಸಾತ್ವೀಕಳು ಆಗಿದ್ದಳು (25:41, 44).* ದಾವೀದನನ್ನು ಸಮೀಪಿಸಿದಾಗ ದೃಢವಾಗಿದ್ದಳು ಆದಾಗ್ಯೂ ದೀನತೆಯಿಂದ ನಡಕೊಂಡಳು. ಕೋಪದಲ್ಲಿದ್ದ ದಾವೀದನೊಂದಿಗಿನ ಅವಳ ಮಾತುಗಳಲ್ಲಿ ದೀನತೆ ಎದ್ದು ಕಾಣುತ್ತಿತ್ತು. ಈ ಘಟನೆಯಲ್ಲಿ 1 ಪೇತ್ರ 3:2-4ರ ಸುಂದರವಾದ ಉದಾಹರಣೆ ಇದೆ:

> ನೀವು ನಿರ್ಮಲರಾಗಿಯೂ ಭಯಭರಿತರಾಗಿಯೂ ನಡೆದುಕೊಳ್ಳುವದನ್ನು ಅವರು ನೋಡಿ, ... ಜಡೆಹೆಣೆದುಕೊಳ್ಳುವದು ಚಿನ್ನದ ಒಡವೆಗಳನ್ನು ಇಟ್ಟುಕೊ ಳ್ಳುವದು ವಸ್ತ್ರಗಳನ್ನು ಧರಿಸಿಕೊಳ್ಳುವದು ಈ ಮೊದಲಾದ ಹೊರಗಣ ಶೃಂಗಾ ರವೇ ನಿಮ್ಮ ಅಲಂಕಾರವಾಗಿರಬಾರದು. ಸಾತ್ವಿಕವಾದ ಶಾಂತ ಮನಸ್ಸು ಎಂಬ ಒಳಗಣ ಭೂಷಣವೇ ನಿಮ್ಮ ಅಲಂಕಾರವಾಗಿರಲಿ. ಇದು ಶಾಶ್ವತವಾ ದದ್ದೂ ದೇವರ ದೃಷ್ಟಿಗೆ ಬಹು ಬೆಲೆಯುಳ್ಳದ್ದೂ ಆಗಿದೆ.

*ಅವಳು ಸಂಪರ್ಕದಲ್ಲಿ ಬಂದ ಎಲ್ಲರಿಗೆ ಅವಳು ಆಶೀರ್ವಾದವಾದಳು (25:32).* ದಾವೀದ ನೊಂದಿಗಿನ ಅವಳ ಮೊದಲ ಭೇಟಿಯಲ್ಲಿ ಅವನ ಜೀವನವು ಹೊಸ ಅರ್ಥವನ್ನು ಪಡೆದು ಕೊಂಡಿತು. ಅಬೀಗೈಲಳನ್ನು ಭೇಟಿಯಾದ ಯಾರೇ ಆಗಿದ್ದರೂ, ದಾವೀದನ ಭಾವನೆಗಳನ್ನು ಅರ್ಥಮಾಡಿಕೊಳ್ಳಬಹುದು.

*ಅವಳು ದಯೆ ಮತ್ತು ಅತಿಥಿಸತ್ಕಾರದಲ್ಲಿ ಮುಂದಿರುವ ಯಜಮಾನಿಯಾಗಿದ್ದಳು (25:4).* ಉಣ್ಣೆ ಕತ್ತರಿಸುವ ಕಾರ್ಯಕಲಾಪಗಳಲ್ಲಿ ಉತ್ಸವ ಮತ್ತು ಸಂಭ್ರಮದಿಂದ ಕೂಡಿರುತ್ತಿದ್ದವು. ಅಂಥ ಉತ್ಸಾವಗಳ ಸಿದ್ಧತೆಯು ಬಹು ಕಷ್ಟಕರವಾಗಿಯೂ ಇದ್ದವು. ಆದರೆ ಅಬೀಗೈಲಳು ಅದನ್ನು ಸ್ವೀಕರಿಸಿದಳು ಮತ್ತು ಉತ್ತಮವಾಗಿ ಮಾಡಿದಳು.

ಈ ಸುಂದರವಾದ ಗುಣಗಳು ಸುಂದರಿ ಮತ್ತು ಬುದ್ಧಿವಂತ ಮಹಿಳೆಯನ್ನು ಮಾವ್ರೋನಿನ ಮನುಷ್ಯನಿಗಿಂತ ವಿಶಿಷ್ಟವಾಗಿಸಿದವು. ಅವಳು ನಿಜವಾಗಿಯೂ "ವೈಭ ವದಿಂದಿದ್ದಳು" (ಕೀರ್ತನೆ 45:13).

## ಅವಳ ಸವಾಲುಗಳು

ತನ್ನ ಉದಾಹರಣೆಯಿಂದ ಅಬೀಗೈಲಳು ಮೂರು ಸವಾಲುಗಳನ್ನು ಇಂದಿನ ಆಧುನಿಕ ಮಹಿಳೆಯರಿಗೆ ಕೊಟ್ಟು, ಆಧುನಿಕ ಕ್ರೈಸ್ತ ಮಹಿಳೆಯರು ಅದನ್ನು ಸ್ವೀಕರಿಸುವಂತೆ ಆಹ್ವಾನಿಸುತ್ತಾಳೆ.

ಮೊದಲಿಗೆ, ತಮ್ಮ ಸ್ವಭಾವದಿಂದ ಮತ್ತು ಪ್ರಸನ್ನತೆಯಿಂದ ಎಲ್ಲರಿಗೂ ಆಶೀರ್ವಾದದಾಯಕವಾಗುವಂತೆ ಅವಳು ಸ್ತ್ರೀಯರಿಗೆ ಸವಾಲು ಹಾಕುತ್ತಾಳೆ. ಅಬೀಗೈಲ

ಅಂದರೆ "ಆನಂದಕ್ಕೆ ಕಾರಣ." ಅದು ಇತರರ ಮೇಲೆ ಅವಳು ಬೀರಿದ ಪ್ರಭಾವಕ್ಕೆ ಸರಿಯಾದ ವಿವರಣೆಯಾಗಿದೆ. ಅವಳ ಹೆಸರು ಸೂಚಿಸುವಂತೆ ಅವಳು ಉತ್ಸಾಹದ ವಳು, ಆನಂದ ತರುವವಳು, ಗೆದ್ದುಕೊಳ್ಳುವ ವ್ಯಕ್ತಿತ್ವವುಳ್ಳವಳು. ಅವಳು ಕೋಣೆಯೊ ಳಗೆ ಪ್ರವೇಶಿಸಿದರೆ ಎಲ್ಲವೂ ಬೆಳಕಾಗಿ ಬದಲಾಗುತ್ತಿತ್ತು! ಅವಳು ನಡೆದರೆ, ಸೂರ್ಯನು ಉದಯಿಸುತ್ತಿದ್ದನು, ಪಕ್ಷಿಗಳು ಹಾಡುತ್ತಿದ್ದವು ಮತ್ತು ನಗೆಯು ಹರಡುತ್ತಿತ್ತು! ಅವಳ ಪ್ರಸನ್ನತೆಯು ಆಶೀರ್ವಾದದಾಯಕವಾಗಿತ್ತು ಯಾಕೆಂದರೆ ಆನಂದವು ಅವಳ ಜೊತೆಯಲ್ಲಿ ಯಾವಾಗಲೂ ಇತ್ತು (25:32).

ರೋಷವುಳ್ಳವರನ್ನು ಮತ್ತು ಬೇಸರಗೊಂಡವರನ್ನು ಶಮನಗೊಳಿಸುವ ಸಾಮರ್ಥ್ಯದೊಂದಿಗೆ ಅವಳು ಆಶೀರ್ವಾದ ನಿಧಿಯಾದಳು. ದಾವೀದನನ್ನು ತನ್ನ ಶಾಂತ ಮಾತುಗಳು ಮತ್ತು ಸ್ವಭಾವದಿಂದ ಸಮಾಧಾನಗೊಳಿಸಿದಳು. "ಅಲ್ಲಕಲ್ಲೋಲವಾದ ನೀರಿನ ಮೇಲೆ ಅವಳು ಎಣ್ಣೆಯನ್ನು ಹೊಯ್ದಳು" (25:33; ಜೆಕಾರ್ಯ 8:19; 1 ಪೇತ್ರ 3:11). ಜ್ಞಾನೋಕ್ತಿಯು ಹೇಳುವಂತೆ, "ಕೇಡನ್ನು ಕಲ್ಪಿಸುವವರ ಹೃದಯದಲ್ಲಿ ಮೋಸ; ಹಿತೋಪದೇಶಕರ ಮನಸ್ಸಿನಲ್ಲಿ ಉಲ್ಲಾಸ" (12:20) ಮತ್ತು "ಸಮಯೋಚಿತ ಮಾತುಗಳು ಬೆಳ್ಳಿಯ ನಕಾಸಿಯಲ್ಲಿ ಖಚಿತವಾದ ಬಂಗಾರದ ಹಣ್ಣುಗಳಿಗೆ ಸಮಾನ" (25:11).

ಇತರರು ತಮ್ಮ ಜೀವನಕ್ಕೆ ಒಂದು ಅರ್ಥ ಮತ್ತು ಉದ್ದೇಶವನ್ನು ಕಂಡು ಕೊಳ್ಳುವಂತೆ ಅವಳು ಆಶೀರ್ವಾದದಾಯಕಳಾದಳು. ದಾವೀದನು ದೇವರ ಅಭಿಶಕ್ತನು ಎಂದು ನೆನಪಿಸಿಕೊಟ್ಟಳು. "ನಿನ್ನ ದಾಸಿಯ ಅಪರಾಧಕ್ಕೆ ಕ್ಷಮಾಪಣೆಯಾಗಲಿ; ಸ್ವಾಮಿಯೇ, ನೀನು ಯೆಹೋವನ ಶತ್ರುಗಳೊಡನೆ ಯುದ್ಧ ಮಾಡುವದರಿಂದ ಆತನು ನಿನ್ನ ಮನೆಯನ್ನು ಶಾಶ್ವತವಾಗಿ ಸ್ಥಿರಪಡಿಸುವನು ..." ಎಂದು ಹೇಳಿದಳು (25:28). ಅವನು ದೇವರ ಪರಾಂಬರಿಕೆಯ ಮತ್ತು ಪ್ರೀತಿಯ ಕೇಂದ್ರವಾಗಿದ್ದಾನೆಂದು ನೆನಪಿಸಿಕೊಟ್ಟಳು (25:30). ತದನಂತರದ ಜೀವನದಲ್ಲಿ ಬಹುಶಃ ಅವಳು ದಾವೀದನಿಗೆ ತಾಳ್ಮೆ ಮತ್ತು ಸಂಯಮವನ್ನು ಕಲಿಸ ಬಹುದು. ದಾವೀದನಿಗಿಂತಲೂ ಅನೇಕರಿಗೆ ಅವಳು ಸಹಾಯ ಮಾಡಿದ್ದಾಳೆ. ಅವಳು ಎಲ್ಲಿದ್ದರೂ ಹೆಚ್ಚಿನ ಸೇವೆಯನ್ನು ಸಾಧಿಸುವಂತೆ ಸ್ವಸಂತೋಷದಿಂದ ಸಹಾಯ ಮಾಡಿದ್ದಾಳೆ!

ಎರಡನೇಯದಾಗಿ, ತಮ್ಮ ಜೀವನವನ್ನು ಆಧಾರಮಾಡಲು ನಂಬಿಕೆಯಿರಬೇಕೆಂದು ಸ್ತ್ರೀಯರಿಗೆ ಸವಾಲು ಹಾಕುತ್ತಾಳೆ! ಅಬೀಗೈಲಳ ಸೌಂದರ್ಯಕ್ಕೆ ಒಂದು ಸಂಗತಿಯಿತ್ತು - ನಂಬಿಕೆ! ಅವಳ ಸಾತ್ವಿಕತೆ ಮತ್ತು ಔದಾರ್ಯ, ಕಳಕಳಿ ಮತ್ತು ಕರುಣೆ, ಲಾವಣ್ಯ ಮತ್ತು ಚೆಲವು ಎಲ್ಲವೂ ದೇವರಲ್ಲಿನ ಅವಳ ನಂಬಿಕೆಯಿಂದ ಹುಟ್ಟಿದವು (25:26-31).

ಇಂದು ಸ್ತ್ರೀಯರು ಅಬೀಗೈಲಳ ನಂಬಿಕೆಯನ್ನು ಅನುಸರಿಸುವದಾದರೆ, ವಿವರಿಸಲಾರದ ಆಶೀರ್ವಾದಕ್ಕೆ ಅವರು ಮೂಲರಾಗುತ್ತಾರೆ. ಮಹಿಳೆಯರೇ, ಅಬೀಗೈಲಳಂತೆ ನಿಮ್ಮ ನಂಬಿಕೆಯು ನಿಮ್ಮ ಜೀವನವನ್ನು ಬಲಪಡಿಸಲಿ!

ಮೂರನೇಯದಾಗಿ, ಸ್ತ್ರೀಯರು ಹೊಂದಿಕೊಳ್ಳಬೇಕೆಂದು ಸವಾಲು ಕೊಡುತ್ತಾಳೆ. ಆಗ ಅವರು ಎಷ್ಟೊ ಕೆಟ್ಟದಾದ ಮತ್ತು ಕಷ್ಟದ ಪರಿಸ್ಥಿತಿಗಳನ್ನು ಜಯಿಸಲು ಸಾಧ್ಯ! ಅಬೀಗೈಲಳ ಕುಟುಂಬ ಮತ್ತು ದಾಂಪತ್ಯ ಜೀವಿತ ಕೆಟ್ಟದ್ದಕ್ಕಿಂತ ಕೆಟ್ಟದ್ದಾಗಿತ್ತು! ಅಲ್ಲಿ ಆನಂದ ಮತ್ತು ಸಮಾಧಾನವಿರಲಿಲ್ಲ. ಕೇವಲ "ನಿಷ್ಟುರ ಗಂಡನಿಂದ" ಬಂದ ಕತ್ತಲು. ಕುಡುಕು, ದೇವಭಯವಿಲ್ಲದ ಮತ್ತು ಸೂಕ್ಷ್ಮ ಗ್ರಾಹಿಯಲ್ಲದ ಗಂಡನೊಂದಿಗೆ ಜೀವಿಸಬೇಕಿತ್ತು. ಸದಾಕಾಲವು ಅವನ ದುಷ್ಟತನವನ್ನು ವಿವರಿಸುತ್ತಾ ಅವನ ಅಹಂಕಾರದ ಆವೇಶಗಳಿಗೆ ಕ್ಷಮೆಯಾಚಿಸುತ್ತಾ ಇದ್ದಳು. ಆದಾಗ್ಯೂ ಅವಳು ಒಬ್ಬ ಭಕ್ತಳಾಗಿ ಉಳಿದಳು!

ಕೆಲವು ಸ್ತ್ರೀಯರು ಇಂಥ ಸವಾಲನ್ನು ಎದುರಿಸುತ್ತಾರೆ. ನಾಬಾಲನಂತೆ ಕೆಟ್ಟವನಾಗಿರುವ ಪತಿ ಮತ್ತು ಮನೆಗೆ ದಿನನಿತ್ಯ ಗುರಿಯಾಗುತ್ತಾರೆ. ಅವರು ಧೈರ್ಯಶಾಲಿಗಳು ಮತ್ತು

ಗುಣಗುಟ್ಟದವರು. ಒರಟಾದ ಮತ್ತು ನಯವಿಲ್ಲದ ಪತಿಯಿದ್ದರೂ ದೇವರಿಗೆ ನಂಬಿಗಸ್ತ ರಾಗಿರುತ್ತಾರೆ. ಈ ಸವಾಲು ಸರಳವಲ್ಲ. ಸ್ತ್ರೀಯರೇ, ನಾಬಲನಂತ ಗಂಡನೊಂದಿಗೆ ಕಷ್ಟಪಡುತ್ತಿದ್ದು, ಬಿಟ್ಟುಬಿಡಬೇಕೆಂಬ ಶೋಧನೆಯಿದ್ದರೆ, ಬಿಡಬೇಡಿರಿ! ದೈವ ಭಕ್ತ ಅಬೀಗೈಲಳ ನ್ನು ನೆನಪಿಸಿರಿ.

## ಮುಕ್ತಾಯ

ಅಬೀಗೈಲಳು ಸುಂದರಿಯಾಗಿದ್ದಳು, ದೈಹಿಕವಾದ ಅರ್ಥದಲ್ಲಿ ಅಲ್ಲದಿದ್ದರೂ, ಅವಳ ಗುಣ ಮತ್ತು ನಂಬಿಕೆಯಲ್ಲಿ ಮಹಾ ಸವಾಲುಗಳಲ್ಲಿ ಅವಳು ಶಾಂತಳಾಗಿದ್ದಳು; ರೋಷಗೊಂಡ ಹೃದಯವನ್ನು ಶಮನಗೊಳಿಸಿದಳು ಮತ್ತು ನಿಷ್ಟುರ ಕುಡುಕನನ್ನು ಗದರಿಸಿದಳು. ನಿಜವಾ ಗಿಯೂ ಅವಳು ಶಕ್ತಿಶಾಲಿ ಸ್ತ್ರೀ! ದೇವರಲ್ಲಿನ ಅವಳ ನಂಬಿಕೆಯಿಂದ ಆ ಬಲ ಬಂದಿತು!

ಸ್ತ್ರೀಯರೇ, ಈ ವಿಚಾರಗಳನ್ನು ನಿಮ್ಮ ಜೀವಿತಕ್ಕೆ ಅಳವಡಿಸಿರಿ. ನಿಮ್ಮ ಪ್ರಭಾವವನ್ನು ಗಮನಿಸಿರಿ. ಅದನ್ನು ಸಮಾಧಾನ, ಉದ್ದೇಶ ಮತ್ತು ನಂಬಿಕೆಯನ್ನು ಇತರರಲ್ಲಿ ತರುವಂತೆ ಉಪಯೋಗಿಸಿರಿ. "ಅಬೀಗೈಲ" ಎಂದು ಹೇಳಬಾರದ ನಾಮವನ್ನು ದತ್ತು ತೆಗೆದುಕೊಳ್ಳಿರಿ ಮತ್ತು ಈ ಜಗತ್ತಿನಲ್ಲಿ "ಆನಂದ ತರುವದಕ್ಕೆ ಕಾರಣವಾಗಿರಲಿ"!